ಕರ್ನಾಟಕ ಸರ್ಕಾರ

ಸಂಖ್ಯೆ:ಪಿಯು/ಸಿಬ್ಬಂದಿ-2/ಉನೇ/ಹುಮು/47/2013-14

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ.
ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ,
ಮಲ್ಲೇಶ್ವರ, ಬೆಂಗಳೂರು-12.
ದಿನಾಂಕ: 17-08-2016.

**ಜ್ಞಾಪನ**

ವಿಷಯ: ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿನ ಬೋಧಕ-ಬೋಧಕೇತರ ಹುದ್ದೆಗಳನ್ನು ಮುಂದುವರೆಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಇಡಿ 133 ಯೋಯೋಕ 2015 ದಿನಾಂಕ 08-05-2015.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 35 ಡಿಜಿಓ 2009 ದಿನಾಂಕ 29-05-2014.
3. ಸರ್ಕಾರದ ಪತ್ರ ಸಂಖ್ಯೆ: ಇಡಿ 86 ಯೋಯೋಕ 2013 ದಿನಾಂಕ 11-08-2014.
4. ಸರ್ಕಾರದ ಆದೇಶದ ಸಂಖ್ಯೆ: ಇಡಿ 04 ಯೋಯೋಕ 2016 ದಿನಾಂಕ 18-05-2016.

***

ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಬೋಧಕ-ಬೋಧಕೇತರ ಹುದ್ದೆಗಳನ್ನು ಮುಂದುವರೆಸುವ ಕುರಿತು ಉಲ್ಲೇಖ-1ರ ಸರ್ಕಾರದ ಆದೇಶದಲ್ಲಿ 2015-16ನೇ ಸಾಲಿಗೆ ಸಂಬಂಧಿಸಿದಂತೆ ಮುಂದುವರೆಸಿ ಆದೇಶಿಸಲಾಗಿತ್ತು.

ಉಲ್ಲೇಖ-2ರಲ್ಲಿ ಸರ್ಕಾರವು ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ, ವೃಂದ ಮತ್ತು ನೇಮಕಾತಿ ನಿಯಮಗಳನ್ನು ಜಾರಿಗೆ ತಂದಿದ್ದು, ಸದರಿ ಅಧಿಸೂಚನೆಯ ನಿಯಮಗಳ ಅನ್ವಯ ಬರುವ ಎಲ್ಲಾ ಹುದ್ದೆಗಳು ಶಾಶ್ವತ ಹುದ್ದೆಗಳೆಂದು ಯೋಜನೆಯಡಿ ಬರುವ ಹುದ್ದೆಗಳನ್ನು ತಾತ್ಕಾಲಿಕ ಹುದ್ದೆಗಳೆಂದು ಸ್ಪಷ್ಟೀಕರಿಸಿ ಗೆಜೆಟ್‌ನಲ್ಲಿ ಪ್ರಕಟಿಸಲಾಗಿದೆ ಎಂದು ನಿರ್ದೇಶನ ನೀಡಿರುತ್ತದೆ.

ಯೋಜನೆಯಡಿ ಬರುವ ಹುದ್ದೆಗಳಿಗೆ ಉಲ್ಲೇಖ-4ರ ಆದೇಶದಲ್ಲಿ ಸರ್ಕಾರವು 2016-17ನೇ ಸಾಲಿನ ಮುಂದುವರಿಕಾ ಆದೇಶವನ್ನು ಹೊರಡಿಸಿರುತ್ತದೆ. ಆದ್ದರಿಂದ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಯೋಜನೆ ಮತ್ತು ಯೋಜನೇತರ ಅಡಿ ಬರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ಅನುದಾನ ಬಿಡುಗಡೆ ಮಾಡಿ ಆದೇಶಿಸಿರುವುದರಿಂದ ವೇತನ ಬಿಡುಗಡೆ ಮಾಡಲು ಈ ಮೂಲಕ ಸೂಚಿಸಿದೆ.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:
1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
3) ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು ಮತ್ತು ತಾಲ್ಲೂಕು ಖಜಾನಾಧಿಕಾರಿಗಳು.
4) ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ.
5) ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರುಗಳಿಗೆ.
6) ಇ- ಆಡಳಿತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
7) ಕಛೇರಿ ಪ್ರತಿ.